ದಿನಾಂಕ 19.09.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಎ.ಎಸ್., ವಕೀಲರಿಂದಃ-

7. ನನ್ನ ಹಿಂದಿನ ವಿಚಾರಣೆಯಲ್ಲಿ ನಾವು ಅರ್ಜಿ ಕೊಟ್ಟಿಲ್ಲ ಎಂದು ಹೇಳಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ನಾವು ಅರ್ಜಿ ಕೊಟ್ಟ ಮೇರೆಗೆ ಉಪವಿಭಾಗಾಧಿಕಾರಿಗಳ ಆದೇಶ ಸಂಖ್ಯೆ ಟಿಎಎ/2008-09 ದಿನಾಂಕ 28.10.2008 ರಂತೆ ಎಂ.ಆರ್ ನಂ.51/2008-09 ನಿಪಿ-4 ರಂತೆ ಖಾತೆ ದಾಖಲಾಗಿರುವುದು ಎನ್ನುವುದು ಸರಿಯಲ್ಲ. ನಿಪಿ-4 ದಾಖಲೆಯಲ್ಲಿ ತಿದ್ದುಪಡಿ ಆದೇಶದಂತೆ ಅಂಗೀಕರಿಸಿದೆ ಎಂಬ ಷರಾ ಇದೆ ಎನ್ನುವುದು ಸರಿಯಲ್ಲ. ನಿಪಿ-9 ಹಾಗೂ ನಿಪಿ-10 ಪಹಣಿಗಳು ಸರ್ವೇ ನಂ.96/2 ರ 3 ಪುಟಗಳ ಪಹಣಿಯಾಗಿದ್ದು, ಸದರಿ 3 ಪುಟಗಳ ಪೈಕಿ ನಾನು ಸದರಿ ದಾಖಲೆಯ 3ನೇ ಪುಟದ ಪ್ರತಿಯನ್ನು ಹಾಜರುಪಡಿಸಿಲ್ಲ ಎನ್ನುವುದು ನಿಜ. ಸರ್ವೇ ನಂ.96/2 ರ 11 ಗುಂಟೆ ಪೋಡಾದ ನಂತರ ಯಾವ ಸಂಖ್ಯೆ ಹೊಂದಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೇ ನಂ.96/2 ರ 11 ಗುಂಟೆ ಪೋಡಾಗಿ ಸರ್ವೇ ನಂ.96/8 ಎಂದಾಗಿದ್ದು, ಅದು 1ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎನ್ನುವುದು ಸರಿಯಲ್ಲ.

8. ದಾವಾ ಅನುಸೂಚಿ ಬಿ ಸ್ವತ್ತು ನಮಗೆ ಸೇರಿದ್ದು ಎನ್ನುವುದನ್ನು ಸಾಬೀತುಪಡಿಸುವ ಸಂಬಂಧ ನಾನು ನೋಂದಾಯಿತ ಪತ್ರವನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಪತ್ರದಲ್ಲಿ ಸದರಿ ಸ್ವತ್ತಿನ ಸರ್ವೇ ನಂಬರ್ ಹಾಗೂ ವಿಸ್ತೀರ್ಣ ಎಷ್ಟಿದೆ ಎನ್ನುವುದು ನನಗೆ ಗೊತ್ತಿದೆ. ಸರ್ವೇ ನಂ.96/2 ರ ಒಟ್ಟು ವಿಸ್ತೀರ್ಣ ಖರಾಬನ್ನು

ಹೊರತುಪಡಿಸಿ 1 ಎಕರೆ 26 ಗುಂಟೆ ಇರುತ್ತದೆ. ಸದರಿ 1 ಎಕರೆ 26 ಗುಂಟೆ ಪೈಕಿ 24 ಗುಂಟೆ ಸ್ವತ್ತನ್ನು ರಾಮಯ್ಯನಿಗೆ ಮಾರಾಟ ಮಾಡಲಾಗಿದೆ? ಎಂದರೆ ಸಾಕ್ಷಿಯು 24 ಗುಂಟೆ ಸ್ವತ್ತು ನಮ್ಮ ತಂದೆ ರಾಮಯ್ಯನ ಹೆಸರಿಗೆ ಕೊಟ್ಟಿದ್ದು ಅದು ಯಾವ ದಾಖಲೆಯ ಮೂಲಕ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 24 ಗುಂಟೆ ಜಮೀನು ರಾಮಯ್ಯನ ಹೆಸರಿಗೆ ಯಾವ ರೀತಿ ಆಗಿದೆ ಎನ್ನುವ ವಿಚಾರವನ್ನು ಈ ದಾವೆಯಲ್ಲಿ ನಾನು ಹೇಳಿಲ್ಲ. ಸರ್ವೇ ನಂ.96/2 ರ 1 ಎಕರೆ 26 ಗುಂಟೆ ಪೈಕಿ 24 ಗುಂಟೆ ಜಮೀನನ್ನು ರಾಮಯ್ಯ ಖರೀದಿಸಿದ್ದು, 11 ಗುಂಟೆ ಜಮೀನು ಮಣಹರಿಗೌಡನ ಮಗ ಮಾಯಣ್ಣ ಉರುಫ್ ಮೋಟಪ್ಪ ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಸದರಿ 24 ಗುಂಟೆ ಹಾಗೂ 11 ಗುಂಟೆ ಕ್ರಯವಾದ ಸ್ವತ್ತುಗಳನ್ನು ಹೊರತುಪಡಿಸಿ ಉಳಿದ 31 ಗುಂಟೆ ಜಮೀನು ಮಾತ್ರ ನಮಗೆ ಸೇರಿದ ಜಮೀನು ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು 42 ಗುಂಟೆ ನಮ್ಮದು ಎಂದು ನುಡಿಯುತ್ತಾರೆ. 42 ಗುಂಟೆ ನಮಗೆ ಸೇರಿದ ಜಮೀನು ಎನ್ನುವುದನ್ನು ಸಾಬೀತುಪಡಿಸುವ ಸಂಬಂಧ ನಮ್ಮ ತಂದೆಯ ಹೆಸರಿಗೆ ಆದಂತಹ ಕ್ರಯಪತ್ರವನ್ನು ಹಾಜರುಪಡಿಸಿದ್ದೇನೆ. ನಾನು ಅಂತಹ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎನ್ನುವುದು ಹಾಗೂ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

9. ಮಾಯಣ್ಣ ಅಲಿಯಾಸ್ ಮೋಟಪ್ಪ ಖರೀದಿಸಿದ 11 ಗುಂಟೆ ಜಮೀನು ಆತನ ಅಣ್ಣ ತಮ್ಮಂದಿರ ನಡುವೆ ಆದಂತಹ ವಿಭಾಗದ ಮೂಲಕ 1 ನೇ ಪ್ರತಿವಾದಿಯ ಹೆಸರಿಗೆ ಬಂದಿತು ಎನ್ನುವುದು ಸರಿಯಲ್ಲ.

ಸದರಿ ವಿಭಾಗಪತ್ರದ ಮೂಲಕವೇ 11 ಗುಂಟೆ ಜಮೀನಿಗೆ 1ನೇ ಪ್ರತಿವಾದಿಯ ಹೆಸರಿಗೆ ನಿಪಿ-3 ರಂತೆ ಖಾತೆ ದಾಖಲಾಗಿದ್ದು ಸದರಿ ದಾಖಲೆಯನ್ನು ನಾನೇ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಸ್ವತ್ತಿನ ಸಂಬಂಧ ಖಾತೆಯಾದ ಸಮಯದಿಂದಲೂ 1ನೇ ಪ್ರತಿವಾದಿ ಸದರಿ 11 ಗುಂಟೆ ಸ್ವತ್ತಿನ ಸ್ವಾಧೀನಾನುಭವದಲ್ಲಿರುವುದು ಎನ್ನುವುದು ಸರಿಯಲ್ಲ. ಮೋಜಣಿ ಇಲಾಖೆಯಿಂದ 1ನೇ ಪ್ರತಿವಾದಿಯ ಸ್ವಾಧೀನಾನುಭವವನ್ನು ಪರಿಗಣಿಸಿ ಅವರ ಹೆಸರಿಗೆ ಪ್ರತ್ಯೇಕವಾಗಿ ಪೋಡಿಯಾಗಿ ಖಾತೆ ದಾಖಲಾಗಿರುವುದು ಎನ್ನುವುದು ಸರಿಯಲ್ಲ. ಅದೇ ಪ್ರಕಾರ ನನ್ನ ಹೆಸರಿಗೆ ಪೋಡಿಯಾಗಿ 31 ಗುಂಟೆ ಜಮೀನಿಗೆ ಖಾತೆಯಾಗಿದೆ ಎನ್ನುವುದು ನಿಜ. ಅದರಂತೆ ನಾನು 31 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇನೆ ಎನ್ನುವುದು ನಿಜ. 1ನೇ ಪ್ರತಿವಾದಿಯ ಹೆಸರಿಗೆ 11 ಗುಂಟೆ ಜಮೀನಿಗೆ ಖಾತೆಯಾದ ನಂತರದಲ್ಲಿ ಅವರು ಸದರಿ ಜಮೀನಿನ ಆಧಾರದ ಮೇರೆಗೆ ವ್ಯವಸಾಯ ಸೇವಾ ಸಹಕಾರ ಸಂಘ, ಹುಣಸನಹಳ್ಳಿಯಿಂದ ಸಾಲ ಪಡೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಮೋಟಪ್ಪ 11 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡ ಸಮಯದಿಂದಲೂ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ಆ ನಂತರ ವಿಭಾಗಪತ್ರದ ಪ್ರಕಾರ 1ನೇ ಪ್ರತಿವಾದಿ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎನ್ನುವುದು ನಿಜ. ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ದಾಖಲಿಸಿ, ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

2 ರಿಂದ 4ನೇ ಪ್ರತಿವಾದಿಗಳ ಪರ ಲಿಖಿತ ಹೇಳಿಕೆ ಸಲ್ಲಿಸದ

ಕಾರಣ ಹಾಗೂ ಅವರ ಪರ ವಕೀಲರು ಗೈರು ಹಾಜರಿರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.